ಹಿಡಿದು ಅವನ್ನು ಚಿತ್ರಗಳಾಗಿ ಬಣ್ಣಿಸುತ್ತಿದ್ದರು.

ಪ್ರಕೃತಿ ಸೌಂದರ್ಯವನ್ನು ಆರಾಧಿಸುವ ಕಲೆಯನ್ನು ವಿರೂಪಾಕ್ಷಿಗೆ ಚಿಕ್ಕಂದಿನಿಂದಲೇ ಬೋಧಿಸಿದ್ದರು ಅಪ್ಪಾಜಿ. ಎಷ್ಟೋ ಬಾರಿ ಕತ್ತಲ ತೆರೆ ಸರಿಯದ ಮುಂಜಾನೆ ಹೊತ್ತಿನಲ್ಲಿ ಅವಳೊಂದಿಗೆ ಮಾತಂಗ ಬೆಟ್ಟದ ಶಿಖರ ಹತ್ತಿ ಅದ್ಭುತವಾದ ಸೂರ್ಯೋದಯವನ್ನು ಅವಳಿಗೆ ತೋರಿಸಿದ್ದರು.

ಹೊಂಬಣ್ಣದ ಬೆಂಕಿ ಚೆಂಡಿನಂತೆ ಕ್ಷಿತಿಜವನ್ನು ಸೀಳಿಕೊಂಡು ಮೇಲೇರುತ್ತಿದ್ದ ಸೂರ್ಯ – ಹೊಂಗಿರಣಗಳಲ್ಲಿ ತೊಯ್ದು ಚಿನ್ನದ ಮುಲಾಮು ಲೇಪಿಸಿಕೊಂಡಂತೆ ಬೆಟ್ಟದ ಬುಡದಲ್ಲಿ ರಾರಾಜಿಸಿದ ವಿಜಯನಗರದ ರಾಜಧಾನಿ ವಿರೂಪಾಕ್ಷಪುರ –



ಗದ್ದೆ ತೋಟಗಳ ಹಸಿರು ಹರಹಿನ ಮಧ್ಯೆ ಜರತಾರಿ ಅಂಚು ಕಟ್ಟಿದಂತೆ ಹರಿದ ತುಂಗಭದ್ರೆ –

ಬೆಳಗಿನ ಸುಂದರ ದೃಶ್ಯಗಳು ಅವಳ ಮೊಗದಲ್ಲಿ ಮೂಡಿಸಿದ ಬೆರಗಿನ ಭಾವವನ್ನು ಕಂಡು ಅಪ್ಪಾಜಿಯವರಿಗೆ ಹೇಳಲಾರದಷ್ಟು ಆನಂದ –

ಅಪ್ಪಾಜಿಯೊಂದಿಗೆ ಇರುವುದೇ ಒಂದು ಸಂತಸದ ಅನುಭವ. ವಿಜಯ ಯಾತ್ರೆಯನ್ನು ಮುಗಿಸಿಕೊಂಡು ರಾಜಧಾನಿಗೆ ಹಿಂದಿರುಗಿದ ಅಪ್ಪಾಜಿ, ತನ್ನ ಮನಸ್ಸಿನ ಹಂಬಲವನ್ನು ಅರಿತವರಂತೆ ಸ್ವತಃ ಈ ಪ್ರವಾಸಕ್ಕೆ ಏರ್ಪಾಡುಗಳನ್ನು ಮಾಡಿದರು. ಯಾವ ತೊಂದರೆಯೂ ಇಲ್ಲದೆ, ಯಾರ ಕಾಟವೂ ಇಲ್ಲದೆ ತನ್ನ ಕುಟುಂಬದವರೊಂದಿಗೆ ಹಾಯಾಗಿ ಸ್ವಲ್ಪ ಕಾಲ ಕಳೆಯಲು ನಿರ್ಧರಿಸಿದರು. ಆ ಆನಂದದ ಪ್ರವಾಸಕ್ಕೆ ಅವರು ಆರಿಸಿಕೊಂಡ ತಾಣ ಅಪಾರ ಜಲ ಸಂಪತ್ತನ್ನು ಹೊಂದಿದ್ದ ಈ ಸುಂದರವಾದ ಶಿವನಸಮುದ್ರ ಸೀಮೆಯನ್ನ. ಆ ಸೀಮೆಯ ಒಂದು ಉಪವನದಲ್ಲಿ ಸೌಕರ್ಯವಾದ ಗುಡಾರಗಳನ್ನು ನಿರ್ಮಿಸಲು ಆಜ್ಞಾಪಿಸಲಾಯಿತು. ರಾಣೀವಾಸಕ್ಕೆ ಸೇರಿದ ಪರಿಚಾರಿಕೆಯರು, ಸೇವಕಿಯರು, ದಾದಿಗಳು, ಸಖಿಯರು, ತಾಂಬೂಲ ಕಟ್ಟುವ ಕನ್ಯೆಯರು, ನರ್ತಕಿಯರು, ಗಾಯಕಿಯರು ಮುಂತಾದ ಒಂದು ಹೆಂಗಳೆಯರ ದಂಡನ್ನೇ ಸಕಲ ಸಾಮಗ್ರಿಗಳೊಂದಿಗೆ ಸ್ಥಳಕ್ಕೆ ವರ್ಗಾಯಿಸಲಾಯಿತು.

ರಾಜಕುಮಾರನಾದ ಮಲ್ಲಿಕಾರ್ಜುನ ತನ್ನ ಗರಡಿ ಮನೆಯನ್ನೂ ಅಸ್ತ್ರಶಸ್ತ್ರ ಅಭ್ಯಾಸವನ್ನೂ